ಕೊಯ್ಲು ಮತ್ತು ಇಳುವರಿ :

ಗಿಡಗಳು ಹೂ ಬಿಡಲು ಪ್ರಾರಂಭಿಸುತ್ತಿದ್ದಂತೆ ಕೊಯ್ಲು ಮಾಡಬೇಕು. ಮೃದುವಾದ ಕಾಂಡಗಳನ್ನು ಮಾತ್ರ ಕುಡುಗೋಲಿನಿಂದ ಕತ್ತರಿಸಿ ಬಲಿತ ಕಡ್ಡಿಗಳನ್ನು ಮತ್ತೆ ಚಿಗುರೊಡಯಲು ಬಿಡಬೇಕು. ಒಂದೂವರೆ ತಿಂಗಳಾಗುತ್ತಿದ್ದಂತೆಯೇ ಬೆಳೆಯು ಮತ್ತೆ ಕೊಯ್ಲಿಗೆ ಬರುತ್ತದೆ. ಇದೇ ರೀತಿ ಎಲ್ಲಿಯವರೆಗೆ ಸರಿಯಾದ ಇಳುವರಿಯು ಸಿಗುತ್ತಿರುವುದೋ ಅಲ್ಲಿಯವರೆಗೆ (ಸಾಮಾನ್ಯವಾಗಿ ಒಂದೂವರೆ ವರ್ಷದಿಂದ ಎರಡು ವರ್ಷಗಳವರೆಗೆ) ಗಿಡಗಳನ್ನು ಉಳಿಸಿಕೊಂಡು ಕೊಯ್ಲು ಮಾಡುತ್ತಿರಬಹುದು. ತುಳಸಿಯು ಒಂದು ಹೆಕ್ಟೇರಿಗೆ 2.5 ಟನ್ ಹಸಿ ಸೊಪ್ಪನ್ನು ಒಂದು ಕೊಯ್ಲಿಗೆ ಕೊಡುತ್ತದೆ. ಈ ಸೊಪ್ಪನ್ನು ನೆರಳಿನಲ್ಲಿ ಒಣಗಿಸಬೇಕು. 12% ಅಥವಾ ಅದಕ್ಕಿಂತ ಕಡಿಮೆ ತೇವಾಂಶ ಇದ್ದಾಗ ಅದನ್ನು ಕೋಲಿನಿಂದ ಬಡಿದು ಉದುರಿದ ಎಲೆಗಳನ್ನು ಕಡ್ಡಿಗಳಿಂದ ಬೇರ್ಪಡಿಸಿ ಗೋಣಿ ಚೀಲಗಳಲ್ಲಿ ತುಂಬಬೇಕು. ಸಾಮಾನ್ಯವಾಗಿ ಒಂದು ಹೆಕ್ಟೇರಿನಿಂದ ಒಂದು ಕೊಯ್ಲಿಗೆ 250 ಕೆ.ಜಿ ಒಣಗಿದ ತುಳಸಿ ಎಲೆಯನ್ನು ನಿರೀಕ್ಷಿಸಬಹುದು.

ಖರ್ಚು ಮತ್ತು ಆದಾಯ(ಒಂದು ಹೆಕ್ಟೇರಿಗೆ)

ಬೆಳೆ	ದರ (ಕೆ.ಜಿ.ಗೆ) (ರೂ.)	ಖರ್ಚು (ರೂ.)	ನಿವ್ವಳ ಲಾಭ (ರೂ.)
ತುಳಸಿ	40–65	30,000–45,000	80,000 – 1,20,000

ಮಾರುಕಟ್ಟೆ :

1) ಆಯುಷ್ ಔಷಧಿ ತಯಾರಕರು 2) ಕಾಂತಿವರ್ಧಕ ತಯಾರಕರು
3) ಪೂರಕ ಆಹಾರ ತಯಾರಕರು 4) ರಫ್ತುದಾರರು

ಔಷಧೀಯ ಉಪಯೋಗಗಳು:

ಎಲೆಗಳ ರಸವನ್ನು ನೆಗಡಿ, ಕೆಮ್ಮು, ದಮ್ಮು, ಜ್ವರದ ಉಪಶಮನಕ್ಕಾಗಿ ಬಳಸುತ್ತಾರೆ. ಇದರ ಸುಗಂಧ ತೈಲವು ಬ್ಯಾಕ್ಟೀರಿಯ ಮತ್ತು ಕೀಟ ನಿರೋಧಕ ಗುಣಗಳನ್ನು ಹೊಂದಿದೆ.

ವಿಶೇಷ ಸೂಚನೆ :

ಈ ಕರಪತ್ರದಲ್ಲಿನ ಮಾಹಿತಿಯನ್ನು ಹಲವು ಪುಸ್ತಕಗಳಲ್ಲಿನ ಮಾಹಿತಿಯನ್ನು ಆಧರಿಸಿ ಕ್ರೋಡಿಕರಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ರೈತರು ತಜ್ಞರ ಸಲಹೆಯನ್ನು ಪಡೆಯುವಂತೆ ಕೋರಲಾಗಿದೆ. ಈ ಬೆಳೆಯನ್ನು ಮಿಶ್ರ / ಅಂತರ ಬೆಳೆಯಾಗಿ ಬೆಳೆಯುವಂತೆ ಶಿಫಾರಸು ಮಾಡಲಾಗಿದೆ.

ಕರ್ನಾಟಕ ರಾಜ್ಯ ಔಷಧಿ ಗಿಡಮೂಲಿಕಾ ಪ್ರಾಧಿಕಾರ

ತುಳಸಿ

ಫೆಬ್ರವರಿ 2018

ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರ ಕಛೇರಿ
4ನೇ ಮಹಡಿ, ವನವಿಕಾಸ, ಮಲ್ಲೇಶ್ವರಂ,
18ನೇ ಅಡ್ಡರಸ್ತೆ, ಬೆಂಗಳೂರು – 560003.
ದೂರವಾಣಿ ಸಂಖ್ಯೆ : 080–23464089/23466431
ಇ–ಮೇಲ್ : ceokampa@gmail.com

ತುಳಸಿ

ವೈಜ್ಞಾನಿಕ ಹೆಸರು : ಆಸಿಮಮ್ ಸ್ಯಾಂಕ್ಟಮ್ (*Ocimum sanctum*)

ಕುಟುಂಬ : ಲ್ಯಾಮೀಯೇಸಿಯೆ (*Lamiaceae*)

ಉಪಯೋಗಿಸುವ ಭಾಗ : ಎಲೆ, ಬೀಜ, ಕಾಂಡ

ವಾಣಿಜ್ಯ ಹೆಸರು : ತುಳಸಿ

ಪರಿಚಯ:

ಪೂಜನೀಯ ಸಸ್ಯ ಹಾಗೂ ಔಷಧೀಯ ಸಸ್ಯ ಯಾವುದೆಂದರೆ ತಿಳಿದಂಥವರು ಕೂಡಲೇ ಉತ್ತರಿಸುತ್ತಾರೆ "ತುಳಸಿ" ಎಂಬುದಾಗಿ. ಸಾಮಾನ್ಯವಾಗಿ ಲೋಕಹಿತಕಾರಿಯಾದ ಯಾವುದೇ ವಸ್ತುಗಳಿಗೆ ದೈವತ್ವದ ಗೌರವವನ್ನು ಕೊಡುವುದು ಭಾರತೀಯರ ಸಂಪ್ರದಾಯವಾಗಿರುತ್ತದೆ. ಶ್ರೇಷ್ಠ ತುಳಸಿ ಒಂದು ಪ್ರಮುಖ ದ್ವೈವಾರ್ಷಿಕ ಅಥವಾ ತ್ರೈವಾರ್ಷಿಕ ಬೆಳೆ ಆಂಗ್ಲಭಾಷೆಯಲ್ಲಿ ಸೇಕ್ರೆಡ್ ಬೇಸಿಲ್ ಎಂದು ಕರೆಯಲ್ಪಡುವ ಈ ಗಿಡವನ್ನು ಸಾಮಾನ್ಯವಾಗಿ ಮನೆಯ ತೋಟಗಳಲ್ಲಿ ಹಾಗೂ ದೇವಾಲಯಗಳ ಅಕ್ಕ ಪಕ್ಕದಲ್ಲಿ ಬೆಳೆಸುತ್ತಾರೆ.

ತುಳಸಿ ಸಸ್ಯವು ಸರ್ವೇ ಸಾವಮಾನ್ಯವಾದ ಒಂದು ಭಾರತೀಯ ಔಷಧೀಯ ಸಸ್ಯ. ಭಾರತದಲ್ಲಿ ಪ್ರತಿಯೊಬ್ಬರ ಮನೆಯಲ್ಲಿಯೂ ತುಳಸಿಯನ್ನು ಪೂಜಿಸುತ್ತಾರೆ. ಇದರ ಗುಣಪಡಿಸುವ ಮತ್ತು ಶುದ್ಧಿ ಮಾಡುವ ಗುಣಗಳನ್ನು ಅರಿಯದವರೇ ಇಲ್ಲ. ತುಳಸಿಯು ಹೆಚ್ಚಾಗಿ ಚರ್ಮದ ತೊಂದರೆ, ಕೆಮ್ಮು, ಮಲೇರಿಯಾ, ಜ್ವರ ಮುಂತಾದವುಗಳನ್ನು ತಡೆಯುವ ಔಷಧೋಪಚಾರಕ್ಕಾಗಿ ಉಪಯೋಗಿಸಲ್ಪಡುತ್ತದೆ.

ಇತರೆ ಭಾಷೆಯ ಹೆಸರುಗಳು:

ಕನ್ನಡ : ತುಳಸಿ

ಸಂಸ್ಕೃತ : ಸುರಸಾ, ಗೌರಿ.

ಹಿಂದಿ : ತುಲಸೀ

ತೆಲುಗು : ಗಗ್ಗೇರುಚಟ್ಟು, ತುಲಸಿ, ಗಾಪ್ಪರಿಚೆಟ್ಟು

ಇಂಗ್ಲೀಷ್ : ಹೋಲಿ ಬೆಸಿಲ್ (**HOLY BASIL**).

ಹಂಚಿಕೆ: ತುಳಸಿಯನ್ನು ಕರ್ನಾಟಕ, ಆಂಧ್ರ ಪ್ರದೇಶ, ತೆಲಂಗಾಣ, ಗುಜರಾತ್, ಮಧ್ಯಪ್ರದೇಶ ಮುಂತಾದ ರಾಜ್ಯಗಳಲ್ಲಿ ಬೆಳೆಯಲಾಗುತ್ತಿದೆ. ತುಳಸಿಯು ಗಿರ್ ವನ್ಯಜೀವಿಧಾಮ ಗುಜರಾತ್ ಹಾಗೂ ಸಸಾಂಗಿರ್ ರಾಷ್ಟ್ರೀಯ ಉದ್ಯಾನವನಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ತುಳಸಿಯನ್ನು ಉಷ್ಣವಲಯ ಹಾಗೂ ಸಮಶೀತೋಷ್ಣ ವಲಯಗಳಲ್ಲಿ ಬೆಳೆದರೆ ಉತ್ತಮ. ಕರ್ನಾಟಕದಲ್ಲಿ ಗದಗ, ಧಾರವಾಡ, ಬೆಳಗಾವಿ, ಶಿರಸಿ, ಮುಂತಾದ ಜಿಲ್ಲೆಗಳಲ್ಲಿ ಹೆಚ್ಚಾಗಿ ಬೆಳೆಯಲಾಗುತ್ತಿದೆ.

ವಿಧಗಳು:

1. ರಾಮ ತುಳಸಿ : ಎಲೆಗಳು ಬಿಳುಪಾಗಿದ್ದು ಅಗಲ ಎಲೆಗಳನ್ನು ಹೊಂದಿರುತ್ತದೆ.
2. ಶ್ರೀ ಕೃಷ್ಣ ತುಳಸಿ : ಎಲೆಗಳು ಕಪ್ಪು ಬಣ್ಣವಾಗಿದ್ದು ಇದರ ಕಾಂಡವು ಕೆಂಪು ಬಣ್ಣದಲ್ಲಿರುತ್ತದೆ.
3. ವನ ತುಳಸಿ : ಕಾಡುಗಳಲ್ಲಿ ಹೆಚ್ಚಾಗಿ ಕಂಡು ಬರುತ್ತದೆ.
4. ಕರ್ಪೂರ ತುಳಸಿ : ಕರ್ಪೂರ ವಾಸನೆವುಳ್ಳದ್ದು.

ಬೇಸಾಯ ಕ್ರಮಗಳು:

ಮಣ್ಣು ಮತ್ತು ಹವಾಗುಣ :

ಹೆಚ್ಚಾಗಿ ಎಲ್ಲಾ ಗುಣ ಧರ್ಮದ ಮಣ್ಣುಗಳಲ್ಲಿ ಈ ಬೆಳೆಯನ್ನು ಬೆಳೆಯಬಹುದು. ಜೇಡಿಮಣ್ಣು, ಜಂಬಿಟ್ಟಗೆ, ಲವಣಯುಕ್ತ ಮತ್ತು ಸಾರಯುಕ್ತ ಮಧ್ಯಮ ಆಮ್ಲತೆಯುಳ್ಳ ಮಣ್ಣು ಸೂಕ್ತ. ನೀರುಚೆನ್ನಾಗಿ ಬಸಿದು ಹೋಗುವ ಮಣ್ಣುಇದರ ಬೆಳವಣಿಗೆಗೆ ಅವಶ್ಯಕ. ಹೆಚ್ಚಿನ ಮಳೆ ಬೀಳುವ ಪ್ರದೇಶಗಳಲ್ಲಿ ಹಾಗೂ ತೇವಾಂಶವಿರುವ ಹವಾಗುಣದಲ್ಲಿ ಚೆನ್ನಾಗಿ ಬೆಳೆಯುತ್ತದೆ.

ಭೂಮಿ ತಯಾರಿಕೆ:

ಭೂಮಿಯನ್ನು ಚೆನ್ನಾಗಿ ಉಳುಮೆ ಮಾಡಿ ಹದಗೊಳಿಸಬೇಕು, ಹೆಂಟೆಗಳನ್ನು ಒಡೆದು ಕಳೆಗಳನ್ನು ತೆಗೆದು ಭೂಮಿಯನ್ನು ಸಿದ್ಧಪಡಿಸಬೇಕು.

ಸಸಿ ಮಡಿಗಳ ತಯಾರಿಕೆ:

ನರ್ಸರಿ ಮಡಿಗಳನ್ನು ಜೂನ್ ತಿಂಗಳಲ್ಲಿ ತಯಾರಿಸಬೇಕು. 25 ಗ್ರಾಂ, ತುಳಸಿ ಬೀಜಗಳನ್ನು ಸಣ್ಣ ಮರಳಿನೊಂದಿಗೆ ಬೆರೆಸಿ ತಯಾರು ಮಾಡಿದ ನರ್ಸರಿ ಮಡಿಗಳ ಮೇಲೆ ಬಿತ್ತಬೇಕು. ಅದರ ಮೇಲೆ ತೆಳು ಪದರದಂತೆ ನುಣ್ಣನೆಯ ಮಣ್ಣನ್ನು ಎರೆಗೊಬ್ಬರ ಮಿಶ್ರಮಾಡಿ ಹರಡಬೇಕು. ನೀರಿನ ಕ್ಯಾನಿನಿಂದ ನೀರನ್ನು ಹಾಕಬೇಕು. ಸಸಿಮಡಿಯ ಮೇಲ್ಪದರವು ಯಾವಾಗಲೂ ಹಸಿಯಾಗಿರುವಂತೆ ನೋಡಿಕೊಳ್ಳಬೇಕು. ಹತ್ತು ದಿನಗಳ ನಂತರ ಬೀಜದ ಮೊಳಕೆಗಳು ಕಾಣಿಸಿಕೊಳ್ಳುತ್ತವೆ. ಅದಾದ 25 ದಿನಗಳಿಗೆ ಸಸಿಗಳು ಭೂಮಿಯಲ್ಲಿ ನಾಟಿ ಮಾಡಲು ಸಿದ್ಧವಾಗುತ್ತವೆ.

ನಾಟಿ ಮಾಡುವಿಕೆ:

1 ಹೆಕ್ಟೇರ್‌ಗೆ 25 ಟನ್ ಕೊಟ್ಟಿಗೆ ಗೊಬ್ಬರ, 10–15 ಟನ್ ಎರೆಹುಳುಗೊಬ್ಬರ ಚೆನ್ನಾಗಿ ಮಣ್ಣಿನ ಜೊತೆ ಮಿಶ್ರಣ ಮಾಡಿ ಹಾಕಬೇಕು. 3 ರಿಂದ 4 ಅಂಗುಲವಿರುವ ಸಸಿಗಳನ್ನು 60 X 60 ಸೆಂ.ಮೀಟರ್ ಅಂತರದಲ್ಲಿ ನಾಟಿ ಮಾಡಬೇಕು. ನಂತರ ಕೂಡಲೇ ನೀರು ಹಾಯಿಸಬೇಕು.

ನೀರಾವರಿ:

ಮಳೆಯಾಗದಿದ್ದಲ್ಲಿ ಸುಮಾರು ಎಂಟು ದಿನಗಳಿಗೊಮ್ಮೆ ನೀರನ್ನು ಹಾಯಿಸಬೇಕಾಗುವುದು.

ಸಸ್ಯ ಸಂರಕ್ಷಣೆ :

ತುಳಸಿಗೆ ಯಾವುದೇ ನಿಯಮಿತ ಸಸ್ಯ ಸಂರಕ್ಷಣಾಕ್ರಮದ ಅಗತ್ಯ ಇರುವುದಿಲ್ಲ. ಆದರೂ ಹುಳಗಳ ಬಾಧೆಕಂಡು ಬಂದಲ್ಲಿ ಶೇಕಡಾ 10 ಪ್ರಮಾಣದಲ್ಲಿ ಬೇವಿನ ಎಣ್ಣೆಯ ಜೊತೆಗೆ ನೀರನ್ನು ಬೆರೆಸಿ ಎಲೆಗಳ ಮೇಲೆ ವಾರಕ್ಕೊಮ್ಮೆ ಸಿಂಪಡಿಸುವುದು.

ಕಳೆ ನಿಯಂತ್ರಣ:

ಸಸಿಗಳ ಬೆಳವಣಿಗೆಯ ಸಮಯದಲ್ಲಿ ಸುಮಾರು ಎರಡರಿಂದ ಮೂರು ಬಾರಿ ಕಳೆಯನ್ನು ನಿಯಂತ್ರಿಸುವುದು ಅಗತ್ಯ.